ಬಾನು ಮುಷ್ತಾಕ್

ಕಲೆ : ಪ್ರವೀಣ್ ಆಚಾರ್ಯ

# ಹೇಳಿ ಹೋಗು

"ಮೆಹೆಕ್... ಮೆಹೆಕ್... ಎಷ್ಟು ಬಡಕೊಂಡರೂ ನಿನಗೆ ಕಿವಿಯೇ ಕೇಳಿಸುವುದಿಲ್ಲವಾ? ಟೀವಿ ಆಫ್ ಮಾಡು.'' ಸಾಲಿಹಾ ಅತ್ಯಂತ ಕೋಪ ಗೊಂದಲ ಮತ್ತು ದುಃಖದಿಂದ ಮಗಳಿಗೆ ಆದೇಶ ನೀಡಿದಳು. ಅದು ಆದೇಶವೋ ಅಥವಾ ಬೇಡಿಕೆಯೋ ಅವಳಿಗೆ ಅರ್ಥವಾಗಲಿಲ್ಲ. ಇತ್ತೀಚಿನ ದಿನಗಳಲ್ಲಿ ತಾಯಿ ಮಗಳು ಇಬ್ಬರೂ ದೂಡುತ್ತಿದ್ದ ದಿನಗಳು ದಟ್ಟವಾದ ಕಾರ್ಮೋಡದಂತೆ ಆವರಿಸಿದ್ದವು. ಹೀಗಾಗಿ ಒಬ್ಬರ ಮಾತು ಇನ್ನೊಬ್ಬರಿಗೆ ಅರ್ಥವಾಗುತ್ತಿರಲಿಲ್ಲ. ಅಥವಾ ಅರ್ಥವಾದರೂ ಆಗದವರಂತೆ ಅವರಿಬ್ಬರೂ ನಟಿಸುತ್ತಿದ್ದರೋ? ಅರ್ಥ ಮಾಡಿಕೊಳ್ಳಲು ಸಂವಹನದ ಹಾದಿಗಳೆಲ್ಲವೂ ಮುಚ್ಚಿ ಹೋಗಿದ್ದವು. ನಾನೊಂದು ತೀರ ನೀನೊಂದು ತೀರ ಎಂಬಂತೆ ಅವರಿಬ್ಬರ ನಡುವೆ ಅಗಾಧವಾದ ಪ್ರಪಾತವು ಬಾಯಿ ತೆರೆದಿತ್ತು. ಯಾರೇ ಒಂದಿಷ್ಟು ಅಲುಗಾಡಿದರೂ ಆ ಪ್ರಪಾತದೊಳಗೆ ಜಾರಿ ಬೀಳುವಂತಹ ಭಯಾನಕ ಮೌನ ಮತ್ತು ಅನುಮಾನಗಳು ಅಲ್ಲಿ ಹುತ್ತಗಟ್ಟಿದ್ದವು. ಹೀಗಾಗಿ ಒಂದು ಸರಳ ಮಾತು ಕೂಡ ಸಹಸ್ರಾರು ಬಾರಿ ಮಾರ್ದನಿಯಾದಂತೆ ಮತ್ತು ಅದು ಕೂಗುಮಾರಿಯ ಧ್ವನಿಯಾಗಿ ಪರಿವರ್ತನೆಯಾಗುವುದೆಂದು ಅವರಿಬ್ಬರೂ ಅಪಾರ ಅಂಜಿಕೆಯಲ್ಲಿದ್ದರು. ಪರಿಸ್ಥಿತಿ ಹಾಗಿದ್ದರೂ ಕೂಡ ಟೀವಿಯಲ್ಲಿ ಮೂಡಿ ಬರುತ್ತಿದ್ದ ನ್ಯೂಸ್ ಮೆಹೆಕ್‌ಗೆ ಅಪಾಯಕಾರಿ ಎಂದು ಸಾಲಿಹಾ ಏಕಪಕ್ಷೀಯವಾಗಿ ತೀರ್ಮಾನ ಕೈ ಕೊಂಡಿದ್ದಳು. ಆಕೆಯ ತೀರ್ಮಾನ ತನಗೆ ಒಪ್ಪಿತವಲ್ಲವೆಂದು ಧಿಕ್ಕರಿಸಿ ಮೆಹೆಕ್ ಅದರಲ್ಲಿಯೇ ಮುಳುಗಿ ಹೋಗಿದ್ದಳು.

ಆ ಸುದ್ದಿಯಾದರೂ ದರಿದ್ರದ್ದು! ಹಿಂದೀ ಸಿನಿ ಪ್ರಪಂಚದ ನಂಬರ್ ಒನ್ ಹೀರೋಯಿನ್ ಎಂದು ಗುರುತಿಸಲಾಗಿದ್ದ ಮತ್ತು ಅಪಾರ ಬೇಡಿಕೆ ಹೊಂದಿದ್ದ ಹಾಗೂ ಸುರ ಸುಂದರಿಯಾಗಿದ್ದ ನಿಶಾ ತನ್ನ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಸುದ್ದಿಯ ಸುತ್ತಮುತ್ತ ಬಹುತೇಕ ಎಲ್ಲಾ ಟೀವಿ ವಾಹಿನಿಯವರು ತಮ್ಮ ಕ್ಯಾಮೆರಾಗಳನ್ನು ಕೇಂದ್ರೀಕರಿಸಿದ್ದರು. ಆಕೆ ಮೊಬೈಲನ್ನು ಎದುರಿಗಿಟ್ಟು ತನ್ನ ಕುತ್ತಿಗೆಗೆ ಹಗ್ಗ ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ಆಕೆಯ ಕೊನೆಯ ಕ್ಷಣಗಳು ಆ ಮೊಬೈಲಿನಲ್ಲಿ ದಾಖಲಾಗಿದ್ದವು. ಆಕೆಯ ಮೊಬೈಲ್ ಪೊಲೀಸಿನವರ ವಶದಲ್ಲಿತ್ತು. ಆದರೆ ಊಹಾಪೋಹಗಳಿಗೆ ಕೊನೆ ಇರಲಿಲ್ಲ. ಆಕೆಯ ಆತ್ಮಹತ್ಯೆಯ ಪ್ರತಿ ನಿಮಿಷದ ವರದಿಯನ್ನು ಕೊಡುವುದರಲ್ಲಿ ಎಲ್ಲರೂ ಮಗ್ನರಾಗಿದ್ದರು. ಅವಳ ಸೌಂದರ್ಯ, ಶ್ರೀಮಂತಿಕೆಯ ಮತ್ತು ನಟನಾ ಸಾಮರ್ಥ್ಯದ ಬಗ್ಗೆ ವರದಿಯನ್ನು ಕೊಡುತ್ತಾ ಆಕೆಯ ಆತ್ಮಹತ್ಯೆಯ ಬಗ್ಗೆ ಕಾರಣಗಳನ್ನು ಹುಡುಕುತ್ತಾ ಟೀವಿ ಚಾನೆಲ್‌ಗಳ ವರದಿಗಾರರು ತಮ್ಮ ಎಲ್ಲಾ ಸೃಜನಶೀಲತೆಯನ್ನು ಮೆರೆಯುತ್ತಿದ್ದರು. ಖ್ಯಾತ ನಟನೊಬ್ಬನ ಜೊತೆಗೆ ಆಕೆಗಿದ್ದ ಬಾಂಧವ್ಯದ ಬಗ್ಗೆ ಕೆಲವರು ಒತ್ತಿ